ಶ್ರೀ ಜೆ. ಹೆಚ್. ಪಟೇಲ್.—ಮೊದಲು ಅಧಿಕಾರಿಗಳ ಬಗ್ಗೆ ಅಧಿಕಾರಿಗಳ ಬಗ್ಗೆ ಪ್ರಶ್ನೆ ಇದೆ. ಹಿಂದಿನ ಸರ್ಕಾರದಲ್ಲಿ ನಡೆದಿರತಕ್ಕ ಅವ್ಯವಹಾರದ ಒಂದು ಕತೆ. ಇದು ನಡೆದಿರಬಹುದು. ನಾವು ಯಾರನ್ನೂ ರಕ್ಷಣೆ ಮಾಡುವುದಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇ ಬೇಕು. ೧೯೭೯ ರಿಂದ ೧೯೮೨ರವರೆಗೆ ನಮ್ಮ ಸರ್ಕಾರ ಬರುವುದಕ್ಕಿಂತಾ ಮುಂಚೆ ಇದು ನಡೆದಿದೆ. ಮಾನ್ಯ ಸದಸ್ಯರು ಇದನ್ನು ಗಮನಕ್ಕೆ ತಂದ ಮೇಲೆ ನಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅವರು ಹೇಳಿದರೆಂದು ನೇರವಾಗಿ ನಾವು ಅವರನ್ನು ಜಪ್ತಾ ಮಾಡುವುದಕ್ಕಾಗುವುದಿಲ್ಲ. ಇವರ ಮೇಲೆ ತನಿಖೆಯಾಗಿ ತನಿಖಾ ವರದಿ ಬಂದಿದ್ದು ಅದನ್ನು ಉಪಲೋಕಾಯುಕ್ತರಿಗೆ ರೆಫರ್ ಮಾಡಲಾಗಿದೆ. ಅವರು ಎನ್‌ಕ್ವೈರಿ ಮಾಡುತ್ತಾರೆ. ಆಮೇಲೆ ಅವರು ಏನು ಶಿಕ್ಷೆ ಕೊಡಬೆಕೆಂದು ಹೇಳುತ್ತಾರೋ ಅದನ್ನು ಕೊಡುತ್ತೇವೆ.

ಶ್ರೀ ಜಿ. ಎಂ. ಕಾನಡೆ —ಎಷ್ಟು ದಿವಸಕ್ಕೆ ಕೊಡುತ್ತೀರಿ ?

ಶ್ರೀ ಜೆ. ಎಸ್. ದೇಶ್‌ಮುಖ್.—ರಿಪೋರ್ಟ್ ಬಂದ ತಕ್ಷಣ ಕೊಡುತ್ತೇವೆ.

ಶ್ರೀ ಜಿ. ಎಂ. ಕಾನಡೆ.—ಮೊದಲು ಲೋಕಾಯುಕ್ತಕ್ಕೆ ಕೊಟ್ಟಿದ್ದರು, ಈಗ ಉಪ ಲೋಕಾಯುಕ್ತಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅಲ್ಲಿಂದ ರಿಪೋರ್ಟ್ ಯಾವಾಗ ಬರುತ್ತದೆ?

ಶ್ರೀ ಜೆ. ಎಸ್. ದೇಶಮುಖ್.—ವರದಿಯನ್ನು ಬೇಗ ಕೊಡಲಿಕ್ಕೆ ಹೇಳುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ನೀವು ಭಾಷಣ ಮಾಡಬೇಡಿ. ಪ್ರಶ್ನೆ ಮಾತ್ರ ಕೇಳಿ.

ಶ್ರೀ ಬಿ. ಸ್ವಾಮಿರಾವ್.—ಇದರಲ್ಲಿ ಬಹಳ ದೊಡ್ಡ ಅವ್ಯವಹಾರ ನಡೆದಿದೆ, ಕಡೆಗೆ ರೆಫರ್ ಮಾಡಲಾಗಿತ್ತು, ಅದು ಏನಾಗಿದೆಯೋ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮೊದಲು ವಿಜಿಲೆನ್ಸ್‌ಗೆ ರೆಫರ್ ಮಾಡಲಾಗಿತ್ತು. ವಿಜಿಲೆನ್ಸ್‌ನವರು ವರದಿಯನ್ನು ಕೊಟ್ಟರು. ಇದರಲ್ಲಿ ಯಾರ್ಯಾರು ಜವಾಬ್ದಾರರು ಇದ್ದಾರೆ ಅವರನ್ನು ಗುರುತಿಸಲಿಕ್ಕೆ ಹೈ ಲೆವೆಲ್ ಕಮಿಟಿ ನೇಮಿಸಲಾಗಿತ್ತು. ಆ ಕಮಿಟಿಯವರು ಜನವರಿಯಲ್ಲಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಆಧಾರದ ಮೇಲೆ ಉಪ ಲೋಕಾಯುಕ್ತಕ್ಕೆ ಕಳುಹಿಸಲಾಗಿದೆ. ಅವರು ಏನೇನು ಶಿಕ್ಷೆ ಕೊಡಬೇಕೆಂದು ಹೇಳುತ್ತಾರೆ ಅದನ್ನು ಸರ್ಕಾರ ಮಾಡುತ್ತದೆ. ಸರ್ಕಾರಕ್ಕೆ ವರದಿ ಬಂದಮೇಲೆ ಅವರು ಆದರಿಂದ ರಿಕವರಿ ಮಾಡಿಯೊಂದು ಹೇಳುತ್ತಾರೋ, ಸಸ್ಪೆಂಡ್ ಮಾಡಿಯೆಂದು ಹೇಳುತ್ತಾರೋ ಅವರ ಶಿಫಾರಸ್ಸು ಪ್ರಕಾರ ಸರ್ಕಾರ ನಡೆದುಕೊಳ್ಳುತ್ತದೆ.

ರಾಜ್ಯದಲ್ಲಿ ಅಣು ವಿದ್ಯುತ್ ಕೇಂದ್ರ

೪೨೧(೧೦೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಯೋಜನೆ ಏನಾದರೂ ಇದೆಯೆ ;

ಆ) ಹಾಗಿದ್ದಲ್ಲಿ, ಎಲ್ಲಿ ಸ್ಥಾಪಿಸಲಾಗುವುದು?

ಇ) ಈ ಬಗ್ಗೆ ಸಮೀಕ್ಷೆಗಳನ್ನೇನಾದರೂ ನಡೆಸಲಾಗಿದೆಯೆ?

ಈ) ಹಾಗಿದ್ದಲ್ಲಿ ಸಮೀಕ್ಷೆ ನಡೆಸಿರುವ ಸ್ಥಳಗಳಾವುವು, ಮತ್ತು ಯಾವ ಸ್ಥಳ ಸೂಕ್ತವೆಂದು ಸಮೀಕ್ಷೆಯಿಂದ ಕಂಡು ಬಂದಿದೆ?

ಉ) ಈ ಬಗ್ಗೆ ಕೇಂದ್ರ ಸರಕಾರದವರೊಡನೆ ಪತ್ರ ವ್ಯವಹಾರ ನಡೆಸಲಾಗಿದೆಯೆ ಮತ್ತು ಕೇಂದ್ರ ಸರಕಾರದವರ ಪ್ರತಿಕ್ರಿಯೆ ಏನು ?

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಇದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕೈಗಾದಲ್ಲಿ.

ಇ) ಕೇಂದ್ರ ಸರಕಾರ ಸಮೀಕ್ಷೆ ಮಾಡಿದೆ.

ಈ) ಕೇಂದ್ರ ಸರಕಾರದ ಅಣುಶಕ್ತಿ ಇಲಾಖೆಯುರಚಿಸಿದ್ದ ನಿವೇಶನ ಆರಿಸು ಸಮಿತಿಯು ಹತ್ತು ನಿವೇಶನಗಳ ಸಮೀಕ್ಷೆ ನಡೆಸಿತು. ಕುಂದಾಪುರ ತಾಲ್ಲೂಕಿನಲ್ಲಿನ ಕನ್ಯಾನ ಮತ್ತು ಬೈಂದೂರು, ಭಟ್ಕಳ ತಾಲ್ಲೂಕಿನ ಮುರುಡೇಶ್ವರ, ಕಾರವಾರ ತಾಲ್ಲೂಕಿನ ಕೆಮ್ಮಣ್ಣು, ಜೊನ್ನಾಪರ ತಾಲ್ಲೂಕಿನ ಗೇರುಸೊಪ್ಪೆ, ಸಮೀಪ, ಸಾಗರ ತಾಲ್ಲೂಕಿನ ಬಿದನೂರು ಕಾರವಾರ ತಾಲ್ಲೂಕಿನ ಕೈಗಾ ಮತ್ತು ಮುಲ್ಲಾಪುರ ಸಮೀಪ, ತುಂಗಭದ್ರಾ ಮತ್ತು ನಾರಾಯಣಪುರ ಜಲಾಶಯಗಳ ಸಮೀಪದ ಪ್ರದೇಶನಗಳು, ಕೈಗಾ ನಿವೇಶನವು ಸೂಕ್ತವಾಗಿದೆಯೆಂದು ಸಮಿತಿ ತಿಳಿಸಿದೆ.

ಊ) ಇದು ಕೇಂದ್ರ ಸರಕಾರದ ಯೋಜನೆಯಾಗಿದೆ. ವಿದ್ಯುತ್ ಸಂಪರ್ಕ ಮಾರ್ಗಗಳಿಂದ ಅರಣ್ಯ ಪ್ರದೇಶಕ್ಕೆ ಅಪಾಯವು ಕನಿಷ್ಟ ಪ್ರಮಾಣದಲ್ಲಿರುವಂತೆ ಸಂಪರ್ಕ ಮಾರ್ಗಗಳನ್ನು ಬದಲಿಸುವ ನಿಯಮಕ್ಕೆ ಒಳಪಟ್ಟು ತಾತ್ಕಾಲಿಕವಾಗಿ ಈ ಸ್ಥಾವರದ ಸ್ಥಾಪನೆಗೆ ಪ್ರಧಾನ ಮಂತ್ರಿಗಳು ಮಂಜೂರಾತಿ ನೀಡಿರುವುದಾಗಿ ೨೧-೧೧-೧೯೬೮ರ ಪತ್ರದಲ್ಲಿ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ ತಿಳಿಸಿದೆ.

ಶ್ರೀ ಎಂ. ಎಸ್. ಪಾಟೀಲ್.—ಕೈಗಾ ಅಣು ವಿದ್ಯುತ್ ಸ್ಥಾವರದ ಸ್ಥಾಪನೆಗೆ ಹಲವಾರು ಜನರು ತಕರಾರನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿದ್ದಾರೆ. ತೊಂದರೆಯಾಗುತ್ತದೆಂದು ಅವರು ತಕರಾರು ಮಾಡಿರುವುದರ ಬಗ್ಗೆ ಸರ್ಕಾರದ ನಿಲುವೇನು ? ಈ ಯೋಜನೆಯಿಂದ ಎಷ್ಟು ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ ? ಸರ್ಕಾರ ಸವಲತ್ತುಗಳನ್ನು ಕೊಡಬೇಕಾದರೆ ಭೂಮಿ ಕೊಡ ಬೇಕಾಗುತ್ತದೆ ಈ ಬಗ್ಗೆ ಸರ್ಕಾರದ ಜವಾಬ್ದಾರಿ ಏನು ? ಕೈಗಾ ಅಣು ವಿದ್ಯುತ್ ಸ್ಥಾವರದ ಸ್ಥಾಪನೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂದು ಅವರು ತಕರಾರು ಮಾಡುತ್ತಿದ್ದಾರೆ ಅವರ ಮನಸ್ಸನ್ನು ಒಲಿಸಿಕೊಳ್ಳುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆಯೇ ?

ಶ್ರೀ ಜೆ.ಹೆಚ್. ಪಟೇಲ್.—ಇದೇ ಪ್ರಶ್ನೆಯನ್ನು ಮಾನ್ಯ ಕೆ.ಹೆಚ್. ಪಾಟೀಲ್‌ರವರು ಕೇಳಿದ್ದಾರೆ. ಎರಡೂ ಪ್ರಶ್ನೆಗಳನ್ನು ಕ್ಲಬ್ ಮಾಡಬಹುದು. ಅಧ್ಯಕ್ಷರು ಅನುಮತಿ ಕೊಟ್ಟರೆ ಎರಡಕ್ಕೂ ಉತ್ತರ ಕೊಡುತ್ತೇನೆ. ನಮ್ಮ ರಾಷ್ಟ್ರ ಒಂದೇ ಅಲ್ಲ ಪ್ರಪಂಚದಲ್ಲಿಯೇ ಈ ಸಮಸ್ಯೆ ಇದೆ. ಅಣು ಸ್ಥಾವರ ನಿರ್ಮಾಣಕ್ಕೆ ರಷ್ಯಾ ಮತ್ತು ಅಮೆರಿಕಾ ದೇಶಗಳಲ್ಲಿ ಜನರು ಮಾನವ ಹೋಟಿಗೆ ಅಪಾಯವೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ವೈಜ್ಞಾನಿಕ ಯುಗದಲ್ಲಿ ಗೊತ್ತಿರತಕ್ಕ ವಿಜ್ಞಾನ ತಜ್ಞರು ಇದರಿಂದ ಅಪಾಯವಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಮನಸ್ಸಿನಲ್ಲಿ ಊಹಿಸಿಕೊಂಡಿರತಕ್ಕ ಭಯಕ್ಕೆ ಯಾವುದೇ ಆಧಾರವಿಲ್ಲವೆಂದು ಹೇಳಿದ್ದಾರೆ. ಇವತ್ತು ಫ್ರಾನ್ಸ್ ದೇಶದವರು ಅವರಲ್ಲೇಕಡಾ ೭೦ರಷ್ಟು ಅವಶ್ಯಕತೆಯನ್ನು ಅಣುಸ್ಥಾವರದಿಂದ ಪೂರೈಕೆ ಮಾಡಿಕೊಳ್ಳುತ್ತಿದ್ದಾರೆ. ಎಷ್ಟೋ ನಾರ್ವೆ ಸ್ವೀಡನ್ ದೇಶಗಳಲ್ಲಿ ಹೈಡಲ್ ಪ್ರಾಜೆಕ್ಟ್‌ಗಳಿಂದ ವಿದ್ಯುತ್ ಪಡೆಯತಕ್ಕಂಥಸಂದ್ಭ ರಾಷ್ಟ್ರಗಳನ್ನು ಬಿಟ್ಟರೆ ಜಗತ್ತಿನಲ್ಲಿರುವ ಎಲ್ಲಾ ರಾಷ್ಟ್ರಗಳೂ ಕೂಡ ಇಪಕ್ಕಿ ಅಣುಸ್ಥಾವರಗಳನ್ನು ಅನಿವಾರ್ಯವಾಗಿ ಅಭಿವೃದ್ಧಿಪಡಿಸಬೇಕಾಗಿದೆ. ಅಂತೆಯೇ ನಾವು ಕೂಡ ಅಭಿವೃದ್ಧಿಪಡಿಸಬೇಕಾಗಿದೆ. ಆದುದರಿಂದ ಮಾನ್ಯ ಸದಸ್ಯರ ಮನಸ್ಸಿನಲ್ಲಾಗಲೀ, ಬೇರೆ ಇತರರ ಮನಸ್ಸಿನಲ್ಲಾಗಲೀ ಭಯವಿದ್ದರೆ ಅಥವಾ ಡಾಕ್ಟರ್ ಶಿವರಾಮ ಕಾರಂತರು ತಮ್ಮ ಪ್ರಶ್ನೆಯನ್ನು ಸಾರ್ವಜನಿಕವಾಗಿ ಮಾಡಿದ್ದರು ಆದರೆ ತಜ್ಞರ ಅಭಿಪ್ರಾಯದ ಪ್ರಕಾರ ಈ ಭಯಕ್ಕೆ ಅವಕಾಶವೇ ಇಲ್ಲ. ಈಗ ಇಷ್ಟೊಂದು ಸುರಕ್ಷಿತವಾದ ವ್ಯವಸ್ಥೆಯನ್ನು ಮಾಡಲಾಗಿದೆ, Saftey measures are almost perfect now. ಎನ್ನುವುದು ಅವರ ಅಭಿಪ್ರಾಯ. ಇದಕ್ಕೆ ಈಗಾಗಲೇ ನಮ್ಮ ಸರ್ಕಾರದಿಂದ ಮೂರುವರೆ ಸಾವಿರ ಎಕರೆ ಜಮೀನನ್ನು ಕೊಟ್ಟಿದ್ದೇವೆ. ಇದರಲ್ಲಿ ಸ್ವಲ್ಪ ಭಾಗ ಅರಣ್ಯ ಇದೆ. ಸುತ್ತ ಮುತ್ತ ಹಳ್ಳಿಗರು ಯಾರೂ ಇಲ್ಲ. ಇಲ್ಲಿ ಒಟ್ಟು ೨ ಸಾವಿರ ಮೆಗವ್ಯಾಟ್ ಅಂತಿಮವಾಗಿ ಆಗುವುದು. ಮೊದಲನೆಯದಾಗಿ ೨೫೦ ಮೆಗ ವ್ಯಾಟ್‌ನ ಎರಡು ಸ್ಟೇಷನ್‌ಗಳನ್ನು ಪ್ರಾರಂಭ ಮಾಡುತ್ತೇವೆ ನಂತರ ಟೋಟಲ್ ಪ್ರಾಜೆಕ್ಟ್‌ನಲ್ಲಿ ೨೫೦ ಮೆಗಾವ್ಯಾಟ್ ಎರಡು ಸ್ಟೇಷನ್‌ಗಳನ್ನು ಪ್ರಾರಂಭ ಮಾಡುತ್ತೇವೆ. ನಂತರ ಟೋಟಲ್ ಪ್ರಾಜೆಕ್ಟ್‌ನಲ್ಲಿ ೨೫೦ ಮೆಗಾವ್ಯಾಟ್‌ನದ್ದು ಮೂರು ಜನರೇಟಿಂಗ್ ಯೂನಿಟ್ಸ್‌ನಲ್ಲಿ ೫೦೦ ನದ್ದು ಎರಡು ಬರುತ್ತದೆ. ಅದು ನಂತರ, ಈಗ ಅಲ್ಲ.

ಅಧ್ಯಕ್ಷರು.—ಶ್ರೀ ಕೆ.ಹೆಚ್. ಪಾಟೀಲರೇ, ನಿಮ್ಮ ಪ್ರಶ್ನೆಯನ್ನೂ ಕೇಳಿಬಿಡಿರಿ.

ಶ್ರೀ ಕೆ.ಹೆಚ್. ಪಾಟೀಲ್.—ನಾನು ಇನ್ನೊಂದೇ ಸಂಖ್ಯೆಯ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ.ಎಸ್ ಪಾಟೀಲ್.—ಇದರ ಬಗ್ಗೆ ಸಾರ್ವಜನಿಕರ ತಕರಾರು ಇರುವುದರಿಂದ ಈ ಕ್ರಮಕ್ಕೆ ಸರ್ಕಾರದ ನಿಲುವು ಏನಿದೆ ? ಇದು ಮಾಡುವುದು ಸರಿಯಲ್ಲ, ಇದರಿಂದ ತೊಂದರೆಯಾಗುತ್ತದೆ ಎಂದು

ಸ್ವಜನಿಕರು ಸಮಗ್ರವಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಜೆ.ಹೆಚ್. ಪಟೇಲ್,—ಈ ಸಾರ್ವಜನಿಕರ ಸಂಶಯಗಳಿಗೆ ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ರಾಷ್ಟ್ರಪತಿಯಲ್ಲೇ ಹೆಸರಾಂತ ತಜ್ಞರಾದ ಶ್ರೀ ಡಾಕ್ಟರ್ ರಾಜರಾಮಣ್ಣ ಮತ್ತು ಡಾಕ್ಟರ್ ಶ್ರೀನಿವಾಸನ್ ಅವರುಗಳನ್ನು ಕರೆಸಿ ಮತ್ತು ಅಲ್ಲಿ ಪ್ರಮುಖರು ಯಾರು ಇದ್ದರು ಈ ಬಗ್ಗೆ ಸಾರ್ವಜನಿಕವಾಗಿ ಸಂಶಯ ಹುಟ್ಟಿಸಿದವರು ಯಾರು ಇದ್ದರು ಅವರು ಎಲ್ಲರನ್ನೂ ಕರೆಸಿ ವಿಚಾರ ಮಾಡಿ ಈ ತರಹ ಇದೆ ಈ ಬಲಯದಲ್ಲಿ ಏನು ಸುಧಾರಣೆ ಆಗಿದೆ, ಸೇಫ್ಟಿ ಮೇಜರ್ಸ್ ಇದೆ ಎಂದು ಹೇಳಿದರು. ಆದರೂ ಕೂಡ ಕೆಲವರಿಗೆ ಸಮಾಧಾನ ಇಲ್ಲ. ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಅಣು ಸ್ಥಾವರ ನಮಗೆ ಅತ್ಯಂತ ಅವಶ್ಯಕ. ಆದರಲ್ಲೂ ದಕ್ಷಿಣದಲ್ಲಿ ಈ ಸ್ಥಾವರ ವನ್ನು ಕೊಡಬೇಕೆಂದು ಬಹಳ ಪ್ರಯತ್ನಪಟ್ಟು ತರಿಸಿಕೊಂಡಿರುವಂಥಾದ್ದು...and we have go to see that it is executed.

ಅಧ್ಯಕ್ಷರು.—ಶ್ರೀ ಕೆ.ಹೆಚ್. ಪಾಟೀಲರೇ, ನೀವು ಕೇಳಿ.

ಶ್ರೀ ಕೆ.ಹೆಚ್. ಪಾಟೀಲ್.—ನನಗೆ ಸಮಾಧಾನವಾಗಿದೆ.

ಅಧ್ಯಕ್ಷರು,—ಶ್ರೀ ಮಲ್ಲಾರಿಗೌಡರ ಪ್ರಶ್ನೆ ಜೊತೆಗೆ ಶ್ರೀ ಕೆ.ಹೆಚ್. ಪಾಟೀಲರು ಕೇಳಿದ ಪ್ರಶ್ನೆಗೆ ಸಹ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆಂದೇ ಭಾವಿಸಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೆ, ಇನ್ನು ಒಂದು ಪ್ರಶ್ನೆ ಇದೆ. ಸಾರ್ವಜನಿಕರ ಮನಸ್ಸನ್ನು ಒಲಿಸಲಿಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ? ಅವರ ಮನಸ್ಸಿಗೆ ವಿರೋಧವಾಗಿ ಕಾರ್ಯಕ್ರಮಗಳು ನಡೆಯಬಾರದು. ಇನ್ನು ಎಷ್ಟು ವರ್ಷದಲ್ಲಿ ಈ ಕಾರ್ಯಕ್ರಮ ಪ್ರಾರಂಭ ವಾಗುತ್ತದೆ ?

ಶ್ರೀ ಜೆ.ಹೆಚ್. ಪಟೇಲ್.—ಕೆಲಸ ಪ್ರಾರಂಭವಾಗಿದೆ. ಸುಮಾರು ಎರಡು ಸಾವಿರದ ಐನೂರು ಹೆಕ್ಟೇರ್ ಜಮೀನನ್ನು ಕೊಟ್ಟಿದ್ದೇವೆ. ಆ ಭಾಗದಲ್ಲಿ ಒಂದೇ ಒಂದು ಗ್ರಾಮ ಇದೆ. ಅದನ್ನು ಶಿಫ್ಟ್ ಮಾಡಿದ್ದೇವೆ. ಕಾಳಿನದಿ ಎರಡನೇ ಪ್ರಾಜೆಕ್ಟ್‌ನಲ್ಲಿ ಕದ್ರಾ ಡ್ಯಾಮ್ ಇದೆ. ಅಲ್ಲಿ ರಿಸರ್ವಾರ್ ಕಟ್ಟುತ್ತಿರುವುದರಿಂದ ಕೂಲಿಂಗ್ ಟವರ್ ಅವಶ್ಯಕತೆ ಇಲ್ಲ. ಯಾವುದೇ ಆಕ್ಸಿಡೆಂಟ್‌ಗೆ ಅವಕಾಶ ಇಲ್ಲದೆ ರೀತಿಯಲ್ಲಿ ಕೆಲಸ ಪ್ರಾರಂಭಮಾಡಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಮುಗ್ದ ಸ್ವಭಾವದ ಜನರಲ್ಲಿ ಇನ್ನೂ ಭೀತಿ ಇದೆ. ಅದನ್ನು ನಿವಾರಣೆ ಮಾಡುವುದಕ್ಕೆ, ಪ್ರಚಾರಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ಅವರನ್ನು ಕನ್ವಿನ್ಸ್ ಮಾಡುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ಮುಗ್ದ ಜನರ ತಕರಾರು ಇಲ್ಲ. ಬೇರೆಯವರು, ಯಾರಿಗೆ ಈ ವಿಷಯ ಗೊತ್ತಿದೆ, ಅವರೇ ತಕರಾರು ಮಾಡುತ್ತಿರುವುದು. ಈ ಬಿದತಕ್ಕಂಥವರು ವಿದ್ಯಾವಂತರು ಇವರನ್ನು ಬೆಂಗಳೂರಿಗೆ ಕರೆಸಿ ಶ್ರೀ ರಾಜರಾಮಣ್ಣ, ಶ್ರೀನಿವಾಸರಂಥ ಹೆಸರಾಂತ ತಜ್ಞರು ಸಾಕಷ್ಟು ಸಮಜಾಯಿಸಿ ಕೊಟ್ಟಿದ್ದಾರೆ.

ತಳಿ ಅಭಿವೃದ್ಧಿ ಕೇಂದ್ರಗಳು

೧೭೮ (೪೬೫ ಡಿ) ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ರೇಷ್ಮೆ ವ್ಯವಸಾಯ ಪಶು ಸಂಗೋಪನೆ ಹಾಗೂ ಮತ್ಸ್ಯೋದಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಪಶುಸಂಗೋಪನಾ ಯೋಜನೆಯಡಿಯಲ್ಲಿರುವ ತಳಿ ಅಭಿವೃದ್ಧಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಅಭಿವೃದ್ಧಿಪಡಿಸುತ್ತಿರುವ ತಳಿಗಳ ವಿವರಣೆ ಕೊಡುವುದು ?

ಇ) ಹೈನು ತಳಿಗಳನ್ನು ಯಾವ ಯಾವ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ?